# ಕರ್ನಾಟಕ ವಿಧಾನ ಪರಿಷತ್

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | 891 |
| **ವಿಧಾನ ಪರಿಷತ್ ಸದಸ್ಯರ ಹೆಸರು** | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| **ವಿಷಯ** | ಆಧಾರ ಮಾದರಿಯಲ್ಲಿ ಭೂ ದಾಖಲೆಗಳ ವ್ಯವಸ್ಥಿತ ನಿರ್ವಹಣೆಗೆ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ |
| **ಉತ್ತರಿಸಬೇಕಾದ ದಿನಾಂಕ** | 21.09.2022 |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆಧಾರ್ ಮಾದರಿಯಲ್ಲಿ ಭೂ ದಾಖಲೆಗಳ ವ್ಯವಸ್ಥಿತ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ (Unique Land Parcel Identification Number – ULPIN) ಜಾರಿಗೆ ತರಲು ಸರ್ಕಾರ ನಿರ್ಧರಿಸಿರುವುದು ನಿಜವೇ; ಹಾಗಿದ್ದಲ್ಲಿ ಈ ಯೋಜನೆಯನ್ನು ನಗರ ಆಸ್ತಿಗಳನ್ನು ಒಳಪಡಿಸಲಾಗಿದೆಯೇ; (ಈ ಯೋಜನೆ ವಿವರ ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು) | ಹೌದು.<br><br>ಕೇಂದ್ರ ಸರ್ಕಾರದ ನೀತಿಯಂತೆ ಕಂದಾಯ ಇಲಾಖೆಯ ಕೃಷಿ ಜಮೀನು ಮತ್ತು ನಗರಾಸ್ತಿಗಳ ಪ್ರತಿಯೊಂದು ಸರ್ವೆ ನಂಬರ್/ಆಸ್ತಿಗಳಿಗೆ ULPIN (Unique Land Parcel Identification Number) ನಂಬರ್ ನೀಡಲು ಉದ್ದೇಶಿಸಿದೆ.<br>ಕೃಷಿ ಜಮೀನಿಗೆ ಸಂಬಂಧಿಸಿದಂತೆ ಎರಡು ಗ್ರಾಮಗಳ ಆರ್.ಟಿ.ಸಿ ಗಳಿಗೆ ULPIN ನೀಡಿ ವಿತರಿಸಲಾಗಿದೆ. ನಗರಾಸ್ತಿಗಳಿಗೆ ಸಂಬಂಧಿಸಿದಂತೆ ಪಿ.ಆರ್. ಕಾರ್ಡ್ ಗಳಲ್ಲೂ ಸಹ ULPIN ನಂಬರ್ ಗಳನ್ನು ಅಳವಡಿಸಿ ಕೊಳ್ಳಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಈ ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ (ULPIN) ತರುವ ಮುನ್ನ ಕಂದಾಯ ಇಲಾಖೆ ನಿರ್ವಹಿಸುವ ಕಂದಾಯ ಮತ್ತು ಸರ್ವೆ ದಾಖಲೆಗಳನ್ನು ನವೀಕರಿಸುವುದು ಮತ್ತು ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಇರುವ ಅಂದಾಜು 123 ಕೋಟಿ ದಾಖಲೆಗಳನ್ನು ಮತ್ತು ರಿಜಿಸ್ಟರ್ ಗಳನ್ನು ಡಿಜಟಲೀಕರಣಗೊಳಿಸುವುದು ಮುಂತಾದವುಗಳು ಅವಶ್ಯವೆಂದು ಸರ್ಕಾರ ಮನಗಂಡಿದೆಯೇ; ಹಾಗಿದ್ದಲ್ಲಿ ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರ ಹಮ್ಮಿ ಕೊಂಡಿರುವ ಕಾರ್ಯಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ತಾಲ್ಲೂಕು ಕಛೇರಿಯ ಅಭಿಲೇಖಾಲಯಗಳಲ್ಲಿರುವ ಭೌತಿಕ ಕಡತಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿ, ಸಾರ್ವಜನಿಕರಿಗೆ ವಿತರಿಸುವ ಉದ್ದೇಶದಿಂದ ರಾಜ್ಯ ಸರ್ಕಾರದಿಂದ 10 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಗೊಳಿಸ ಲಾಗಿದೆ.<br>ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಪ್ರಥಮ ಹಂತವಾಗಿ 50 ತಾಲ್ಲೂಕುಗಳನ್ನು ಆಯ್ಕೆ ಮಾಡಲು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br>ಮುಂದುವರೆದು "ಸ್ಕ್ಯಾನಿಂಗ್ ಮತ್ತು ಡಿಜಿಟಲೈಸೇಷನ್" ಗಾಗಿ ಭೂಮಿ ಉಸ್ತುವಾರಿ ಕೋಶ ದಿಂದ ತಂತ್ರಾಂಶವನ್ನು ಅಭಿವೃದ್ಧಿಪಡಿಸ ಲಾಗುತ್ತಿದ್ದು, ಪ್ರತಿ ತಾಲ್ಲೂಕು ಕಚೇರಿ, ಉಪ ವಿಭಾಗಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ತಲಾ ಒಂದು ಸ್ಕ್ಯಾನರ್ ನಂತೆ 317 ಸ್ಕ್ಯಾನರ್ ಗಳನ್ನು ಖರೀದಿಸಲು ಇ-ಪ್ರೊಕ್ಯೂರ್ |

| | | |
|---|---|---|
| | | ಮೆಂಟ್ ನಲ್ಲಿ ಟೆಂಡರ್ ಕರೆಯಲಾಗಿದ್ದು ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |
| ಇ) | ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿನ ದಾಖಲೆಗಳನ್ನು ನವೀಕರಣ ಮತ್ತು ಡಿಜಟಲೀಕರಣ ನಂತರ, ಕಂದಾಯ ಕಾಯಿದೆ ಅಡಿ ನಮೂದಿಸಿರುವಂತೆ, ಭೂಮಿಗಳ ಪುನರ್ ಸರ್ವೆ ಮತ್ತು ಪುನರ್ ವ್ಯವಸ್ಥೆ (Re-survey and Re-settlement) ಕೈಗೊಳ್ಳಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳಾವುವು; | ಇಲಾಖೆಯು ರಾಜ್ಯಾದ್ಯಂತ ಆಧುನಿಕ ತಂತ್ರಜ್ಞಾನವಾದ ಡ್ರೋಣ್ ಸರ್ವೆ ಮೂಲಕ ಎಲ್ಲಾ ಕೃಷಿ ಜಮೀನು ಮತ್ತು ನಗರಾಸ್ತಿಗಳನ್ನು ಅಳತೆ ಮಾಡಿ, ಹಕ್ಕು ದಾಖಲೆಗಳನ್ನು ಸಿದ್ಧಪಡಿಸುವ ಮೂಲಕ ರೀ ಸರ್ವೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದ ಮೂಲ ಉದ್ದೇಶಗಳು:<br>• ಡ್ರೋಣ್ ಮೂಲಕ ಸೆರೆ ಹಿಡಿಯಲಾದ satellite image ಮೇಲೆ ಗಡಿಯನ್ನು ಗುರ್ತಿಸಿ, overview map ಅನ್ನು ಅಳವಡಿಸಿ, ಹಕ್ಕು ದಾಖಲೆ ವಿತರಿಸಲಾಗುವುದು.<br>• ಪ್ರತಿಯೊಂದು ಸರ್ವೆ ನಂಬರ್ ನಗರಾಸ್ತಿಗಳಿಗೆ Co-ordinate ನೊಂದಿಗೆ ULPIN ಸಂಖ್ಯೆ ನೀಡಲಾಗುವುದು.<br>• ಸಾರ್ವಜನಿಕರು ಅವರ ಆಸ್ತಿ ಗಡಿ ಗುರ್ತುಗಳನ್ನು ಈ Co-ordinate ಬಳಸಿ, ತಾವೇ ಸ್ವತ: ಗುರುತಿಸಿಕೊಳ್ಳಲು ಸಹಾಯವಾಗುತ್ತದೆ. |
| ಈ) | ರಾಜ್ಯ ಸರ್ಕಾರ ಸರ್ವೆ ಆಫ್ ಇಂಡಿಯಾ ಸಹಯೋಗದೊಂದಿಗೆ ರಾಜ್ಯದ ಆರು ಜಿಲ್ಲೆ ಗಳಲ್ಲಿ ಮಾಡುತ್ತಿರುವ ಪ್ರಾಯೋಗಿಕ ದ್ರೋಣ ಸರ್ವೆ ಕಾರ್ಯಕ್ರಮ ಯಾವ ಹಂತದಲ್ಲಿದೆ ಮತ್ತು ಈ ಸರ್ವೆ ದಿಂದ ಹೊರ ಬಂದಿರುವ ಅಂಶಗಳನ್ನು ಕರ್ನಾಟಕ ಕಾಯಿದೆಯಲ್ಲಿ ಅಳವಡಿಸಿ, ಸರ್ವೆ ದಾಖಲೆಗಳನ್ನು Update ಮಾಡಲು ಕೈಗೊಂಡಿರುವ ಕ್ರಮಗಳೇನು; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು) | ರಾಜ್ಯದ 5 ಜಿಲ್ಲೆಗಳಲ್ಲಿ (ರಾಮನಗರ, ತುಮಕೂರು, ಬೆಳಗಾಂ, ಹಾಸನ ಮತ್ತು ಉತ್ತರಕನ್ನಡ) ಸರ್ವೆ ಆಫ್ ಇಂಡಿಯಾ ಸಹಯೋಗದೊಂದಿಗೆ ದ್ರೋಣ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಹಾಲಿ ರಾಮನಗರ ಜಿಲ್ಲೆಯ ಡ್ರೋಣ್ ಹಾರಾಟ ಪೂರ್ಣಗೊಂಡಿದ್ದು, ತುಮಕೂರು ಜಿಲ್ಲೆಯಲ್ಲಿ ಪ್ರಗತಿಯಲ್ಲಿದ್ದು, ಎರಡು ಗ್ರಾಮಗಳ ಕರಡು ಆರ್.ಟಿ.ಸಿ ಗಳನ್ನು ವಿತರಿಸಿ, ಆಕ್ಷೇಪಣೆ ಕರೆಯಲಾಗಿದೆ.<br><br>ಬೆಂಗಳೂರು ನಗರದ 198 ವಾರ್ಡ್ ಗಳ ಡ್ರೋಣ್ ಹಾರಾಟ ಪೂರ್ಣ ಗೊಂಡಿದ್ದು, 109 ವಾರ್ಡ್ ಗಳ ಡೇಟಾ ಪರಿಶೀಲನೆಗೆ ಸ್ವೀಕೃತಿಯಾದಂತೆ 3,50,530 ಆಸ್ತಿಗಳ ಸಮೀಕ್ಷೆ ಕೈಗೊಳ್ಳಲಾಗಿದ್ದು, 92,187 ಕರಡು ನಗರಾಸ್ತಿ ಮಾಲೀಕತ್ವದ ಆಸ್ತಿ ದಾಖಲೆಗಳನ್ನು ಮಾಲೀಕರಿಗೆ ವಿತರಿಸಲಾಗಿದೆ.<br><br>ಪ್ರಾಯೋಗಿಕ ಡ್ರೋಣ್ ಸರ್ವೆ ಯಲ್ಲಿನ ಸಾಧಕ ಬಾಧಕಗಳನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಆಧುನಿಕ ತಂತ್ರಜ್ಞಾನ ಬಳಸಿ ಡಿಜಿಟಲ್ ಮಾದರಿಯಲ್ಲಿ ಹಕ್ಕು ದಾಖಲೆಗಳನ್ನು ನೀಡುವ ಸಲುವಾಗಿ ಇಲಾಖೆಯಲ್ಲಿ ಜಾರಿಯಲ್ಲಿರುವ |

| | | |
|---|---|---|
| | | ಕರ್ನಾಟಕ ಭೂ ಕಂದಾಯ ನಿಯಮಾವಳಿ 1966 ಗಳಿಗೆ ಸೂಕ್ತ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. |
| ಉ) | ನೆರೆ ರಾಜ್ಯ ಆಂದ್ರ ಪ್ರದೇಶದಲ್ಲಿ ನಾಗರೀಕರ ಆಸ್ತಿ ಹಕ್ಕುಗಳನ್ನು ಬಗೆಹರಿಸಲು ರಾಜ್ಯಾದ್ಯಂತ ದ್ರೋಣ ಸರ್ವೆ ಕೈಗೊಂಡು ಹಕ್ಕುಗಳ ತಕರಾರನ್ನು ಬಗೆಹರಿಸಲು ಟ್ರಿಬ್ಯುನಲ್ ಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಅದರಂತೆ ರಾಜ್ಯ ಸರ್ಕಾರವು ಕೂಡ ಇದೇ ರೀತಿ ಕಾರ್ಯಕ್ರಮ ವನ್ನು ತರಲು ಕ್ರಮ ಕೈಗೊಂಡಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಇಲ್ಲ<br><br>ಇಲಾಖೆಯಲ್ಲಿ ಜಾರಿಯಲ್ಲಿರುವ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಮತ್ತು ಕರ್ನಾಟಕ ಭೂ ಕಂದಾಯ ನಿಯಮಾವಳಿ 1966 ರಡಿಯಲ್ಲಿ ತಿದ್ದುಪಡಿ ಮಾಡುವ ಮೂಲಕ ತಕರಾರು ಇತ್ಯರ್ಥ ಪಡಿಸಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಈ ನಿಯಮಾವಳಿಗಳನ್ನು ಬಳಸಿಕೊಂಡು ರೀ ಸರ್ವೆ ನಲ್ಲಿ ಉದ್ಭವಿಸುವ ತಕರಾರುಗಳನ್ನು ಪರಿಹರಿಸಬಹುದಾಗಿದ್ದು, ಇದಕ್ಕೆ ಪ್ರತ್ಯೇಕ ಟ್ರಿಬ್ಯುನಲ್ ಸ್ಥಾಪಿಸಬೇಕೆಂಬ ಉದ್ದೇಶ ಇಲಾಖೆಯು ಹೊಂದಿರುವುದಿಲ್ಲ. |

ಕಂಇ 286 ಎಂಆರ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು